**Vijaya Karnāṭaka vom Sonntag, 4. Februar 2007, Seite 1:**
**Elliya Kenaḍā, elliya kannaḍa?**

(Über Kannaḍa-Professor Dr. Robert Zydenbos aus Canada in Dharmasthala zum Mahāmastakābhiṣekha.)

# ಎಲ್ಲಿಯ ಕೆನಡಾ.. ಎಲ್ಲಿಯ ಕನ್ನಡ ?

■ ಎ. ಕೃಷ್ಣ ಭಟ್



ರಾಬರ್ಟ್ ಜೈಡೆನ್ ಬೊಸ್

ಧರ್ಮಸ್ಥಳ, ಫೆ.3 - ತಂದೆಯ ಊರು: ನೆದರ್‌ಲ್ಯಾಂಡ್. ತಾಯಿಯ ಊರು: ಇಂಡೋನೇಷ್ಯಾ. ಹುಟ್ಟಿದ್ದು: ಕೆನಡಾದಲ್ಲಿ ಕೆಲಸ ಮಾಡುತ್ತಿರುವುದು: ಜರ್ಮನಿಯಲ್ಲಿ ಆದರೆ, ಮೈಮನಗಳಲ್ಲಿ ತುಂಬಿಕೊಂಡಿರುವುದು: ಕನ್ನಡ... ಕನ್ನಡ! ತುಂಬಾ ಪ್ರೀತಿಯ ಧರ್ಮ: ಜೈನ!

ಇದು ರಾಬರ್ಟ್ ಜೈಡೆನ್ ಬೊಸ್ ಎಂಬ 49ರ ಹರೆಯದ ವ್ಯಕ್ತಿಯ ಪುಟ್ಟ ಪ್ರೊಫೈಲ್! ಕನ್ನಡದ ಮಣ್ಣಿನ ಮಕ್ಕಳು ಎಂದು ಹೇಳಿಕೊಳ್ಳುವ ನಾವು ಕನ್ನಡದ ಮಧ್ಯೆ ಹೆಚ್ಚು ಹೆಚ್ಚು ಇಂಗ್ಲಿಷ್ ಬಳಸುತ್ತೇವೆ. ಆದರೆ, ಅವರ ಬಾಯಲ್ಲಿ ಮುತ್ತಿನಂತೆ ಹೊರಬೀಳುವುದು ಅಚ್ಚ ಕನ್ನಡ, ಸ್ವಚ್ಛ ಕನ್ನಡ! ಎಲ್ಲಿಯ ಕೆನಡಾ, ಎಲ್ಲಿಯ ಕನ್ನಡ!

ಅವರಿಗೆ ಶಿವರಾಮ ಕಾರಂತರು ಪಕ್ಕದ ಮನೆಯವರಷ್ಟೇ ಪರಿಚಿತ. ಯು.ಆರ್.ಅನಂತಮೂರ್ತಿ, ಸುಮತೀಂದ್ರ ನಾಡಿಗ್, ಬನ್ನಂಜೆ ಗೋವಿಂದಾಚಾರ್ಯರು ಆಪ್ತ ಸ್ನೇಹಿತರು.

ಧರ್ಮಸ್ಥಳಕ್ಕೆ ಮಹಾಮಸ್ತಕಾಭಿಷೇಕಕ್ಕೆ ಬಂದಿರುವ ಅವರು ಬಿಳಿ ಧೋತಿ, ಬಿಳಿ ಪೈಜಾಮ ಹಾಕಿಕೊಂಡು ಬಿಳಿ ಕೂದಲಿನೊಂದಿಗೆ ಭಾರತದವರ ಹಾಗೆ ಕಾಣುತ್ತಾರೆ. ಭಾರತದ ಮೇಲಿನ ಪ್ರೀತಿಯಿಂದ ಹೀಗಾಯಿತಾ ಎಂದು ಕೇಳಿದರೆ ಚೆಂದಕ್ಕೆ ನಗುತ್ತಾರೆ. ಬಹುಶಃ ಭಾರತೀಯ ತತ್ವಶಾಸ್ತ್ರ ಓದಿ ಹೀಗಾಯಿತಾ ಎಂದು ಪ್ರಶ್ನೆ ಮಾಡಿಕೊಳ್ಳುತ್ತಾರೆ.

ಬೊಸ್ ಅವರು ಜರ್ಮನಿಯ ಮ್ಯೂನಿಚ್ ವಿಶ್ವ ವಿದ್ಯಾನಿಲಯದಲ್ಲಿ ಇಂಡೋಲಜಿ (ಭಾರತೀಯ ಸಾಂಸ್ಕೃತಿಕ ಅಧ್ಯಯನಗಳು) ವಿಭಾಗದಲ್ಲಿ ಪ್ರೊಫೆಸರ್ ಆಗಿದ್ದಾರೆ. ಭಾರತದ ಸಂಸ್ಕೃತಿಯ ಬಗ್ಗೆ ಕಳೆದ 29 ವರ್ಷಗಳಿಂದ ಅಧ್ಯಯನ ಮಾಡುತ್ತಿದ್ದಾರೆ.

▸ IIನೇ ಪುಟ

Manya Verlag München
Münchener Indologische Zeitschrift (MIZ)
www.manyaverlag.de